ಬಸವ ಜಯಂತಿಯಲ್ಲಿ ಅಧಿಕಾರಿಗಳು ಗೈರು

ಅಧಿಕಾರಿಗಳ ನಡೆಗೆ ದಲಿತ ಮುಖಂಡರ ಆಕ್ರೋಶ | ಗೈರಾದವರಿಗೆ ನೋಟೀಸ್ ಕಳುಹಿಸುವಂತೆ ಒತ್ತಾಯ

ಉದಯಕಾಲ ನ್ಯೂಸ್

ಹುಣಸೂರು: ಜಗಜ್ಯೋತಿ ಬಸವಣ್ಣ ಜಯಂತಿ ಸರ್ಕಾರಿ ಕಾರ್ಯಕ್ರಮವಾಗಿದ್ದು, ಇದರಲ್ಲಿ ಅಧಿಕಾರಿಗಳು ಗೈರಾಗಿರುವುದಕ್ಕೆ ದಲಿತ ಮುಖಂಡರಿಂದ ತೀವ್ರ ಆಕ್ರೋಶ ವ್ಯಕ್ತವಾಯಿತು. ಸರ್ಕಾರಿ ಕಾರ್ಯಕ್ರಮಕ್ಕೆ ಗೈರಾದ ವಿಚಾರವಾಗಿ ಬೇಸರ ವ್ಯಕ್ತಪಡಿಸಿದ ದಲಿತ ಮುಖಂಡ ಡಿ. ಕುಮಾರ್ ಹುಣಸೂರು ತಾಲೂಕು ಆಡಳಿತ ತಹಸೀಲ್ದಾರ್ ಕಛೇರಿಯಲ್ಲಿ ಆಯೋಜಿಸಿದ್ದ ಬಸವ ಜಯಂತಿ ಹಾಗೂ ಹೇಮರೆಡ್ಡಿ ಮಲ್ಲಮ್ಮ ಜಯಂತಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬಸವಣ್ಣ ರವರ ಸಾಮಾಜಿಕ ಕ್ರಾಂತಿಯಿಂದಾಗಿ ದಲಿತರಾದ ನಾವು, ಅವರ ಅನುಭವ ಮಂಟಪದ ಮೂಲಕ ಸಮಾನತೆಯನ್ನು ಕಂಡವರು. ಇಂತಹ ಮಹಾನ್ ನಾಯಕರ ಜಯಂತಿಯಂದು ಸರ್ಕಾರಿ ಅಧಿಕಾರಿಗಳು ಗೈರುಹಾಜರಾಗಿರುವುದನ್ನು ತೀವ್ರವಾಗಿ

ಖಂಡಿಸಿದರು.

ಇದೇ ಸಂದರ್ಭದಲ್ಲಿ ಯಾವ ಯಾವ ಇಲಾಖೆಯ ಅಧಿಕಾರಿಗಳು ಜಯಂತಿ ಕಾರ್ಯಕ್ರಮದಲ್ಲಿ ಹಾಜರಿಲ್ಲವೋ ಅವರಿಗೆ ತಹಸೀಲ್ದಾರ್ ರವರು ನೋಟೀಸ್ ಕಳುಹಿಸಿ ಕ್ರಮವಹಿಸಬೇಕು ಎಂದು ಒತ್ತಾಯಿಸಿದರು.

ವೀರಶೈವ ಸಮಾಜದ ಮುಖಂಡರಾದ ಉಗೇನಹಳ್ಳಿ ಬಸವರಾಜು ಮಾತನಾಡಿ, 12ನೇ ಶತಮಾನದಲ್ಲೇ ಬಸವಣ್ಣ ರವರು ಸಮಾಜದ ಅನಿಷ್ಟ ಪದ್ಧತಿಗಳಾದ ಅಸ್ಪೃಶ್ಯತೆ, ಜಾತೀಯತೆ, ಅಸಮಾನತೆಗಳನ್ನು ತೀವ್ರವಾಗಿ ವಿರೋಧಿಸಿ, ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ಮಾದಿಗ ಸಮಾಜದ ಹರಳಯ್ಯ ಕಲ್ಯಾಣಮ್ಮ ದಂಪತಿಗಳ ಮಗ ಶೀಲವಂತನಿಗೂ ಬ್ರಾಹ್ಮಣ ಸಮಾಜದ ಮಧುವರಸಯ್ಯನ ಮಗಳು ಲಾವಣ್ಯಳಿಗೂ ಅಂತರ್ಜಾತಿ ವಿವಾಹ ಮಾಡಿಸಿ, ಸಮಾಜದಲ್ಲಿ ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿದರು. ದಲಿತರ ಮಗ ಬ್ರಾಹ್ಮಣ ಸಮಾಜದ ಮಗಳಿಗೂ ಅಂತರ್ಜಾತಿ ವಿವಾಹ ಮಾಡಿದ ಜಾತಿ ಮನಸ್ಸಿನ ಮೇಲ್ವರ್ಗದವರು ತೀವ್ರವಾಗಿ ವಿರೋಧಿಸಿ ಕೋಪಗೊಂಡು ತಡೆದುಕೊಳ್ಳಲಾಗದೆ ಬಸವಣ್ಣ ನವರನ್ನು ಕೊಲೆ ಮಾಡಿಸಿದರು. ಇವರ ಕೊಲೆಯನ್ನು ನದಿಯಲ್ಲಿ ಮುಳುಗಿ ಐಕ್ಯರಾದರೆಂದು ಸುಳ್ಳು ಹೇಳುತ್ತಿದ್ದಾರೆ ಎಂದರು.

ದ.ಸಂ.ಸ ಮುಖಂಡ ನಿಂಗರಾಜ್ ಮಲ್ಲಾಡಿ ಮಾತನಾಡಿ, ಸಾವಿರಾರು ವರ್ಷಗಳಿಂದ ಅವಮಾನ, ಶೋಷಣೆ, ಅಸ್ಪೃಶ್ಯತೆ, ಜಾತೀಯತೆ, ಅಸಮಾನತೆಗಳ ಕೂಪದಲ್ಲಿ ನಲುಗಿ ಹೋಗಿ, ಕತ್ತಲೆಯ ಬದುಕನ್ನು ಸಾಗಿಸುತ್ತಿದ್ದ ಅವಮಾನಿತ ಜಾತಿಗಳಿಗೆ ಜಗಜ್ಯೋತಿ ಬಸವಣ್ಣ ರವರು 850ವರ್ಷಗಳ ಹಿಂದೆಯೇ ಅನುಭವ ಮಂಟಪದ ಮೂಲಕ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಟ ಮಾಡಿದವರು. ಅವಕಾಶ ವಂಚಿತರಾದ ದಲಿತರಿಗೆ ಅನುಭವ ಮಂಟಪದಲ್ಲಿ ಅವಕಾಶ ಕಲ್ಪಿಸಿ ಸಮಾನತೆಯನ್ನು ಕಲ್ಪಿಸಿಕೊಟ್ಟರು ಎಂದರು. ಈ ಸಂದರ್ಭದಲ್ಲಿ ಹುಣಸೂರು ತಹಶೀಲ್ದಾರ್ ನರಸಿಂಹಯ್ಯ, ಉಪತಹಶೀಲ್ದಾರ್ ಶ್ರೀಪಾದ, ವೀರಶೈವ ಮುಖಂಡರು, ರಾಷ್ಟ್ರೀಯ ಹಬ್ಬಗಳ ಸಮಿತಿಯ ಸದಸ್ಯರಾದ ಜಯರಾಮ್, ಬಸವಲಿಂಗಯ್ಯ, ಖಲೀಂದ್ ರಾಚಪ್ಪ, ಭಾಸ್ಕರ್, ಸುಬ್ಬರಾವ್, ದ.ಸಂ.ಸದ ಬಲ್ಲೇನಹಳ್ಳಿ ಕೆಂಪರಾಜು, ಕಾಂಗ್ರೆಸ್ ಮುಖಂಡ ಪುಟ್ಟರಾಜು, ಕಛೇರಿಯ ಮಹಿಳಾ ಸಿಬ್ಬಂದಿಗಳು, ಹೇಮರೆಡ್ಡಿ ಮಲ್ಲಮ್ಮ ಅಭಿಮಾನಿಗಳಾದ ರೆಡ್ಡಿಕೊಪ್ಪಲು ಗ್ರಾಮದ ಮುಖಂಡರು ಹಾಜರಿದ್ದರು.

ಚುಟುಕು ಸುದ್ದಿ

ಆರೋಹಣ ಸೆಂಟ್ರಲ್ ಸ್ಕೂಲ್‌ಗೆ ಶೇ.100 ಫಲಿತಾಂಶ

ಉದಯಕಾಲ ನ್ಯೂಸ್

ಬನ್ನೂರು: ಪಟ್ಟಣದ ಸಮೀಪದ ಸೋಮನಾಥಪುರ ಗ್ರಾಮದ ಕುಳ್ಳನಕೊಪ್ಪಲಿ ಗೇಟ್ ಬಳಿ ಇರುವ ಆರೋಹಣ ಸೆಂಟ್ರಲ್ ಸ್ಕೂಲ್‌ಗೆ ಶೇ.100 ಫಲಿತಾಂಶ ಬಂದಿದೆ.

2023-24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಾಜರಾಗಿದ್ದ, ಶಾಲೆಯ 15 ವಿದ್ಯಾರ್ಥಿಗಳಲ್ಲಿ, ಎಲ್ಲಾ 15 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, 3 ವಿದ್ಯಾರ್ಥಿಗಳಾದ ಬಿ.ಕೆ. ಸಹನಾ ಶೇ.94.56, ಎಂ.ಬಬಿತಾ ಶೇ.93.92, ನವ್ಯಶ್ರೀ ಶೇ.90.4 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಮತ್ತು 12 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಉತ್ತಮ ಅಂಕವನ್ನು ಗಳಿಸಲು ಶ್ರಮಿಸಿದ ಶಾಲಾ ವಿದ್ಯಾರ್ಥಿಗಳನ್ನು ಮತ್ತು ಶಿಕ್ಷಕ ವೃಂದದವರನ್ನು ಶಾಲೆಯ ಕಾರ್ಯದರ್ಶಿ ಎನ್.ಎಂ.ರಾಮಚಂದ್ರ ಸೇರಿದಂತೆ ಸದಸ್ಯ ವೃಂದದವರು ಅಭಿನಂದಿಸಿದರು.

622 ಅಂಕ ಪಡೆದ ಹಂಸಿತ ಅರಸೀಕೆರೆಗೆ ಪ್ರಥಮ

ಉದಯಕಾಲ ನ್ಯೂಸ್

ಅರಸೀಕೆರೆ: ನಗರದ ಹೊರವಲಯದ ಅಮರಗಿರಿ ಮಾಲೇಕಲ್ಲು ತಿರುಪತಿ ಶ್ರೀ ಚಂದ್ರಶೇಖರ ಭಾರತೀ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಹತ್ತನೇ ತರಗತಿಯ ವಿದ್ಯಾರ್ಥಿನಿ ಹಂಸಿತ ಮೌದ್ಗಲ್ಯ 625 ಕ್ಕೆ 622 ಅಂಕ ಪಡೆದು, ಅರಸೀಕೆರೆ ತಾಲೂಕಿಗೆ ಪ್ರಥಮ ಸ್ಥಾನ ರಾಜ್ಯಕ್ಕೆ 4ನೇ ಸ್ಥಾನ ಪಡೆದು ಕೀರ್ತಿ ತಂದಿದ್ದಾರೆ. ಅಪರ್ಣ, ವೇದಿಕೆ ರಘು, ರವರ ಸುಪುತ್ರಿ, ಇವರನ್ನು ಶ್ರೀ ಚಂದ್ರಶೇಖರ ಭಾರತೀ ಇಂಟರ್‌ನ್ಯಾಷನಲ್ ಸ್ಕೂಲ್ ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು.

ಈ ವೇಳೆ ಶ್ರೀ ಚಂದ್ರಶೇಖರ ಭಾರತೀ ಇಂಟರ್‌ನ್ಯಾಷನಲ್ ಸ್ಕೂಲ್ ಅಮರಗಿರಿ ತಿರುಪತಿ ಶಾಲಾ ಟ್ರಸ್ಟಿ ಕಲ್ಯಾಡಿ ಹೀರಣಯ್ಯ, ಅಳಿಕೆರೆ ಗೋಪಿ, ರಾಮಚಂದ್ರ, ಹಂಸಿತ ಮೌದ್ಗಲ್ಯ, ಅಪರ್ಣ ಹಾಜರಿದ್ದರು.

ಇಂದು ಗೀತ ಗಾಯನ ಸಮಾರಂಭ ಆಯೋಜನೆ

ಉದಯಕಾಲ ನ್ಯೂಸ್

ಮೈಸೂರು: ಮೈಸೂರು ಮೆಲೋಡಿ ಸಿಂಗರ್ಸ್ ಗ್ರೂಪ್ ವತಿಯಿಂದ ಇದೇ ಮೇ.11ರ ಸಂಜೆ ನಾಲ್ಕಕ್ಕೆ ನಗರದ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಅಮ್ಮನಿನಗಾಗಿ ಒಂದು ಹಾಡು ಎಂಬ ಗೀತಾ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಂಡದ ಮುಖ್ಯಸ್ಥ ಪಿ.ಮೋಹನ್‌ಕುಮಾರ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ವೇಳೆ ತಾಯಂದಿರಗಾಗಿ ಮೀಸಲಿಟ್ಟ 70, 80 ಹಾಗೂ 90ರ ದಶಕದ ಸುಮಾರು 35 ರಿಂದ 40 ಹಾಡುಗಳನ್ನು 13 ಜನ ಗಾಯಕರು ಹಾಡಲಿದ್ದಾರೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದು ತಿಳಿಸಿದರು.

ಈ ವೇಳೇ ತಂಡದ ಮಂಜುಳಾ, ಲಕ್ಷ್ಮಿ ಹೇಮಂತ್ ಹಾಗೂ ರುದ್ರಾಚಾರಿ ಹಾಜರಿದ್ದರು.

ಕೆ.ಆರ್.ಷಣ್ಮುಖಸ್ವಾಮಿ ನಿಧನ

ಉದಯಕಾಲ ನ್ಯೂಸ್

ತಿ.ನರಸೀಪುರ: ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಕೆ.ಆರ್. ಷಣ್ಮುಖಸ್ವಾಮಿ(77) ಶುಕ್ರವಾರ ನಿಧನರಾದರು.

ಮೃತರಿಗೆ ಪತ್ನಿ, ಓರ್ವ ಪುತ್ರ ಇದ್ದು, ಮೃತ ಷಣ್ಮುಖಸ್ವಾಮಿ ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮೃತರ ಅಂತ್ಯಕ್ರಿಯೆ ಇಂದು ಪಟ್ಟಣದಲ್ಲಿ ನೆರವೇರಿತು. ಕೆಲ ವರ್ಷಗಳ ಕಾಲ ಕಸಾಪದಲ್ಲಿ ಕ್ರಿಯಾಶೀಲರಾಗಿ ಕರ್ತವ್ಯ ನಿರ್ಹಿಸಿದ್ದ ಇವರು ಇತ್ತೀಚೆಗಷ್ಟೇ ತಾವೇ ಬರೆದಿದ್ದ ಕವನ ಸಂಕಲನಗಳ ಪುಸ್ತಕವನ್ನು ಬಿಡುಗಡೆ ಮಾಡಿದ್ದರು. ಷಣ್ಮುಖಸ್ವಾಮಿ ನಿಧನಕ್ಕೆ ತಾಲ್ಲೂಕು ಕಸಾಪ ಗೌರವಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳು, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ವೈ.ಡಿ.ರಾಜಣ್ಣ, ಚಂದ್ರಶೇಖರ್, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರ ಹುಂಡಿ ಸಿದ್ದಪ್ಪ, ಸೇರಿದಂತೆ ಹಲವಾರು ಮುಖಂಡರು ಸಂತಾಪ ಸೂಚಿಸಿದ್ದಾರೆ.

ತಾಲೂಕು ಆಡಳಿತ ವತಿಯಿಂದ ಶ್ರೀ ಬಸವೇಶ್ವರ ಜಯಂತಿ ಆಚರಣೆ

ಉದಯಕಾಲ ನ್ಯೂಸ್

ಗುಂಡ್ಲುಪೇಟೆ: ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಹಾಗೂ ತಾಲೂಕು ಆಡಳಿತ ವತಿಯಿಂದ ಶ್ರೀ ಬಸವೇಶ್ವರ ಜಯಂತಿ ಆಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಲೋಕಸಭಾ ಸಾರ್ವತ್ರಿಕ ಚುನಾವಣೆ ಮಾದರಿ ನೀತಿ ಸಮಿತಿ ಜಾರಿಯಲ್ಲಿರುವ ಹಿನ್ನೆಲೆ ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ತಹಶೀಲ್ದಾರ್ ಮಂಜುನಾಥ್ ರವರ ನೇತೃತ್ವದಲ್ಲಿ ಬಸವೇಶ್ವರ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸುವ ಮೂಲಕ ಆಚರಿಸಲಾಯಿತು.

ಬಳಿಕ ಮಾತನಾಡಿದ ತಹಶೀಲ್ದಾರ್ ಮಂಜುನಾಥ್ ಅವರು, 12ನೇ ಶತಮಾನದಲ್ಲಿ ಬಾಗೇವಾಡಿಯಲ್ಲಿ ಸಂಪ್ರದಾಯಸ್ಥ ಬ್ರಾಹ್ಮಣ ದಂಪತಿಗಳ ಒಡಲಲ್ಲಿ ಜನಿಸಿದ ಬಸವಣ್ಣನವರು. ವರ್ಣಾಶ್ರಮ ಪದ್ಧತಿಯ ಅಂದಿನ ಸಮಾಜದಲ್ಲಿದ್ದ ಪ್ರಾಣಿಬಲಿ, ಆಡಂಬರ ಪೂಜೆ, ಯಜ್ಞ ಯಾಗಾದಿಗಳೆಂಬ ಮೂಢನಂಬಿಕೆಗಳನ್ನು ಖಂಡಿಸಿ, ಭಕ್ತಿಮಾರ್ಗಕ್ಕೆ ಹೊಸ ತಿರುವನ್ನು ನೀಡಿದರು. ಜಾತಿ-ಮತಗಳ ನೆಲೆಗಟ್ಟನ್ನು ತೊಲಗಿಸಿ ಜಾತ್ಯಾತೀತ ಸಮಾಜದ ನಿರ್ಮಾತೃರು ಎನಿಸಿದರು.



ಸಮಾಜದಲ್ಲಿ ಹಲವಾರು ಕಾರಣಗಳಿಂದಾಗಿ ತುಳಿತಕ್ಕೆ ಒಳಗಾದ ಬಡಜನತೆಯೇ ಅಸ್ಪೃಶ್ಯರಾಗಿದ್ದಾರೆ. ಇವರು ಮತಧರ್ಮಗಳೆಂಬ ಕಟ್ಟಳೆಗೆ ಸಿಲುಕಿ ಸೊರಗಿದ್ದಾರೆ ಎಂದು ಅರಿತ ಬಸವಣ್ಣನವರು, ನಮ್ಮ ಭರತ ಖಂಡದ ಪ್ರಗತಿ ಜಾತಿಮತ ಭೇದವಿಲ್ಲದ ಸಮಾನತಾ ಸಮಾಜದಿಂದ ಮಾತ್ರ ಸಾಧ್ಯ ಎಂದರು. ಈ ದೃಷ್ಟಿಯಿಂದ ಇವತ್ತಿನ ಜಗತ್ತಿನ ಯುವ ಪೀಳಿಗೆ ಅವರ ತತ್ವಸಿದ್ಧಾಂತಗಳನ್ನು ಅಳವಡಿಸಿಕೊಳ್ಳುವ ಮೂಲಕ ಬಸವಣ್ಣನವರಂತೆ ನಿಷ್ಕಾಮಂತ ಸಮಾಜ ನಿರ್ಮಿಸಲು ಶ್ರಮಿಸಿದ ಕಾರ್ಯಕರ್ಲ್ಪಕ್ಕೆ ಮುಂದಾಗಬೇಕೆಂದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶೈಲಾ ಕುಮಾರ್, ತಾಲೂಕು ಶಿರಸ್ತೆದಾರ್ ಮಹೇಶ್, ಪುರಸಭಾ ಮುಖ್ಯ ಅಧಿಕಾರಿ ವಸಂತ್ ಕುಮಾರಿ, ಆರ್‌ಐ ಮನೋಹರ್, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು,ಸಿಬ್ಬಂದಿಗಳು ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರುಗಳು, ಸಾರ್ವಜನಿಕರು ಇತರರು ಹಾಜರಿದ್ದರು.

ಮೈಸೂರಿನ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ವಿಶ್ವ ಗುರು ಸಮಾನತಾವಾದಿ ಬಸವಣ್ಣನವರ ಜಯಂತಿಯನ್ನು ಅವರ ಪುತ್ಥಳಿಗೆ ಕಾವೇರಿ ಕ್ರಿಯಾ ಸಮಿತಿಯ ಅಧ್ಯಕ್ಷ ಎಸ್. ಜಯ ಪ್ರಕಾಶ್ ಪುಷ್ಪಾರ್ಚನೆಯನ್ನು ಮಾಡಿ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಕ್ರಿಯಾ ಸಮಿತಿಯ ಕಾರ್ಯದರ್ಶಿ ತೇಜೇಶ್ ಲೋಕೇಶ್ ಗೌಡ, ಮೈಸೂರು ಜಿಲ್ಲಾ ಚಿನ್ನ ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ಅಧ್ಯಕ್ಷ ಸುರೇಶ್ ಗೋಲ್ಡ್, ಪ್ರಮೀಳಾ, ಪೂರ್ಣಚಂದ್ರ ತೇಜಸ್ವಿ, ನಾಗರಾಜು, ಮಹೇಶ್ ಗೌಡ, ಮಹದೇವು, ಲಯನ್ ಶಂಕರ್ ಗುರು, ಪ್ರಭಾಕರ, ವಿಷ್ಣು, ಸಂಜಯ್ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

ಇಂದು ವಿ.ಶ್ರೀನಿವಾಸ ಪ್ರಸಾದ್ ಅವರ ಪುಣ್ಯಾನುಮೋದನಾ ಕಾರ್ಯಕ್ರಮ

ಉದಯಕಾಲ ನ್ಯೂಸ್

ತಿ.ನರಸೀಪುರ: ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮೇ 11ರಂದು ವಿ.ಶ್ರೀನಿವಾಸ ಪ್ರಸಾದ್ ಅವರ ಪುಣ್ಯಾನುಮೋದನಾ ಕಾರ್ಯಕ್ರಮಕ್ಕೆ ಪಕ್ಷಾತೀತ ಹಾಗೂ ಜಾತ್ಯಾತೀತವಾಗಿ ತಾಲೂಕಿನ ಎಲ್ಲ ವರ್ಗದ ಜನರು ಆಗಮಿಸಿ ಕಾರ್ಯಕ್ರಮ ಯಶಸ್ವಿ ಗೊಳಿಸಿಕೊಡುವಂತೆ ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಮನವಿ ಮಾಡಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಗುರುವಾರ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಭಾರತದ ಸಂವಿಧಾನದ ಆಶಯ ನ್ಯಾಯ ಸ್ವತಂತ್ರ್ಯ, ಸಮಾನತೆ, ಸಹೋದರತ್ವದ ತಳಹದಿಯ ಆಧಾರದಲ್ಲಿ ವಿ.ಶ್ರೀನಿವಾಸ್ ಪ್ರಸಾದ್ ಜೀವನ ನಡೆಸಿದ್ದು ಅವರು ಸರ್ವ ಮಾನವರ ಏಳಿಗೆಗೆ, ಪ್ರಗತಿಗೆ ದುಡಿದಿದ್ದರು ಎಂದು ಮಹದೇವಯ್ಯ ಸ್ಮರಿಸಿದರು.

ಪ್ರಸಾದ್ ಅವರು ನಿರ್ಧಿಷ್ಟವಾಗಿ ಯಾರನ್ನೂ ಜಾತಿ, ಮತ, ಪಂಥದ ಆಧಾರದ ಮೇಲೆ ಗುರುತಿಸಿದವರಲ್ಲ.

ಅವರ ಬಳಿ ಬಂದ ಯಾವುದೇ ವ್ಯಕ್ತಿಗಾದರೂ ಭಗವಾನ್ ಗೌತಮ ಬುದ್ಧರ ಪ್ರೀತಿ ಸಹನೆ, ಮೈತ್ರಿ, ಕರುಣೆ ಸಮಚಿತ್ತ ಮನೋಭಾವ ಹೊಂದಿ ಸಹಾಯ ಮಾಡುತ್ತಿದ್ದರು. ಭಗವಾನ್ ಗೌತಮಬುದ್ಧ, ಅಶೋಕ ಮಹಾರಾಜ, ಬಸವಣ್ಣ, ಡಾ.ಬಿ.ಆರ್.ಅಂಬೇಡ್ಕರ್ ಅವರು ತೋರಿದ ಹಾದಿಯಲ್ಲಿ ನಡೆದಿದ್ದರು. ಅವರ ಅಗಲಿಕೆ ಇಡೀ ಮಾನವ ಕುಲಕ್ಕೆ ತುಂಬಲಾರದ ನಷ್ಟ ಎಂದು ತಿಳಿಸಿದರು.

ಜಿ.ಪಂ. ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ, ಕರೋಹಟ್ಟಿ ಪ್ರಭುಸ್ವಾಮಿ, ತಾ.ಪಂ.ಮಾಜಿ ಸದಸ್ಯ ಮಾದಾಪುರ ಎಂ.ಎಸ್.ಬಸವರಾಜು, ರಾಮಲಿಂಗಯ್ಯ, ಸೋಸಲೆ ಶಶಿಕಾಂತ್, ಕುಕ್ಕೂರು ಗಣೇಶ್, ಮೂಗೂರು ಸಿದ್ದರಾಜು, ಸೋಸಲೆ ಮಹದೇವಸ್ವಾಮಿ, ತುಂಬಲ ಮಂಜುನಾಥ್, ನಂಜುಂಡಯ್ಯ, ನಿಲಸೋಗೆ ಬಸವರಾಜು, ಕುಕ್ಕೂರು ಪ್ರಸನ್ನ, ಎಪಿಎಂಸಿ ಮಾಜಿ ಅಧ್ಯಕ್ಷ ಮಹೇಶ್ ಇದ್ದರು.

ಕರವೇಯಿಂದ ಬಸವೇಶ್ವರ ಜಯಂತಿ ಆಚರಣೆ

ಉದಯಕಾಲ ನ್ಯೂಸ್

ಗುಂಡ್ಲುಪೇಟೆ: ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣದ) ವತಿಯಿಂದ ಪಟ್ಟಣದ ಕರವೇ ಕಚೇರಿಯಲ್ಲಿ ಚಾಮರಾಜನಗರ ಜಿಲ್ಲಾ ಘಟಕ ಹಾಗೂ ಗುಂಡ್ಲುಪೇಟೆ ತಾಲೂಕು ಘಟಕದ ವತಿಯಿಂದ ಮಾನವತಾವಾದಿ ವಿಶ್ವಗುರು ಜಗಜ್ಯೋತಿ ಬಸವೇಶ್ವರ ಜಯಂತಿ ಆಚರಿಸಲಾಯಿತು.

ಈ ವೇಳೆ ಜಿಲ್ಲಾಧ್ಯಕ್ಷರಾದ ಆರ್.ಮೋಹನ್ ಮಾತನಾಡಿ, ಬಸವಣ್ಣನವರು ಮಹಾನ್ ಕ್ರಾಂತಿಕಾರಿಯನ್ನು ಮಾಡಿ, ಎಲ್ಲಾ ಜನಾಂಗದಲ್ಲಿಯೂ ಒಬ್ಬೊಬ್ಬರು ಶರಣನನ್ನು ಹುಟ್ಟುಹಾಕಿ, ಅನುಭಚವ ಮಂಟಪದಲ್ಲಿ ಎಲ್ಲರನ್ನು ಸಮಾನತೆಯಿಂದ ಗೌರವಿಸಿದ ಮಹಾನ್ ದಾರ್ಶನಿಕ ವ್ಯಕ್ತಿ ಎಂದರು.

ನಂತರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಿಯಾಜ್ ಪಾಷಾ ಮಾತನಾಡಿ, 12ನೇ ಶತಮಾನದಲ್ಲಿ ಸಮ ಸಮಾಜದ ನಿರ್ಮಾಣಕ್ಕಾಗಿ ಒಂದು ಕ್ರಾಂತಿಯನ್ನೇ ಸೃಷ್ಟಿಸಿ, ಕಾಯಕವೇ ಕೈಲಾಸ ಎಂದು ಸಾರಿದ ಮಹಾನ್ ದಾರ್ಶನಿಕರು. ಬಸವಣ್ಣನವರು

ಹಾಕಿಕೊಟ್ಟ ದಾರಿಯಲ್ಲಿ ಇಂದು ನಾವುಸಾಗುತ್ತಿರುವುದು ನಮ್ಮ ಸುದೈವ ಸಂಗತಿ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷರಾದ ನಾಗೇಶ್ ನಾಯಕ್, ಜಿಲ್ಲಾ ಸಹ ಕಾರ್ಯದರ್ಶಿ ಆರ್.ಗಣೇಶ್, ಗುಂಡ್ಲುಪೇಟೆ ತಾಲೂಕು ಘಟಕದ ಅಧ್ಯಕ್ಷ ಮಂಜು ಆರ್, ಉಪಾಧ್ಯಕ್ಷ ಮಣಿ ದೊಡ್ಡಸ್ವಾಮಿ, ಕಾರ್ಯಾಧ್ಯಕ್ಷ ಭರತ್ ಕೆ (ಸಿದ್ದು) ಹಾಗೂ ಅಮೃತ ಸೇರಿದಂತೆ ಸಂಘಟನೆಯ ಹಲವಾರು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್
ನೋಂ.ಕಚೇರಿ : 11ನೇ ಮಹಡಿ, ಟವರ್ ಎ, ಪೆನಿನ್ಸುಲಾ ಬಿಸಿನೆಸ್ ಪಾರ್ಕ್, ಗಣಪತ